## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ**. 156/2020**

ಚಾಸಾ-4 ಪ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 16-10-2025

| | | |
|---|---|---|
| ಹೆಸರು | : | ವಿಜಯಕುಮಾರ |
| ತಂದೆಯ ಹೆಸರು | : | ಬಸವಣ್ಣಪ್ಪ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ AEE |
| ವಾಸಸ್ಥಳ | : | ಕಲಬುರಗಿ |

-: ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**

ದಿನಾಂಕಃ 15-07-2019 ರಿಂದ 10-09-2020 ರವರೆಗೆ ನಾನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಉಪವಿಭಾಗ ಅಫಜಲಪೂರದಲ್ಲಿ ಸಹಾಯ ಕಾರ್ಯನಿರ್ವಾಹಕ ಅಭಿಯಂತಕರಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 17-12-2019 ರಂದು ಅಫಜಲಪುರ ಪೋಲಿಸ ಠಾಣೆಯಿಂದ ಒಂದು ಕೋರಿಕೆ ಪತ್ರ ಬಂದಿದ್ದು ಸದರಿ ಕೋರಿಕೆ ಪತ್ರದಲ್ಲಿ ಜಪ್ತಿ ಪಡಿಸಿಕೊಂಡ ಮರಳಿನ ಅಳತೆ ಮಾಡಿಕೊಡಲು ಕೇಳಿಕೊಂಡಿದ್ದು ಸದರಿಯವರ ಕೋರಿಕೆಯಂತೆ ಜಪ್ತಿ ಪಡಿಸಿಕೊಂಡ ಮರಳಿನ ಅಳತೆ ಕಾರ್ಯ ಮಾಡಿರುತ್ತೇನೆ. 1 ಕ್ಯೂಬಿಕ ಮೀಟರ ಇರುತ್ತದೆ.

ಸಾಕ್ಷಿಗೆ ಮರಳಿನ ಅಳತೆಯ ಮೌಲ್ಯಮಾಪನ ಪತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ**-7** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ**-7**(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-</u>

ಪೋಲಿಸ ಠಾಣೆಯಲ್ಲಿ ಮರಳಿನ ಅಳತೆ ಕಾರ್ಯ ಮಾಡಿರುತ್ತೇನೆ. ನಾನು ಮೌಲ್ಯ ಮಾಪನ ಮಾಡಿ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ